# 'ತಾರತಮ್ಯತೆ'

- ಮಾರ್ಪಳ್ಳಿ ಆರ್. ಮಂಜುನಾಥ, ಶಿವಮೊಗ್ಗ.

ಒಬ್ಬ ವ್ಯಕ್ತಿ - ಇನ್ನೊಬ್ಬ ವ್ಯಕ್ತಿಯನ್ನು ಕಾಣುವ, ಗುರುತಿಸುವ, ನಡೆಸಿಕೊಳ್ಳುವ ಸಹಕರಿಸುವ, ಗೌರವಿಸುವ ಮನೋಭಾವದಲ್ಲಿ ನಡೆನುಡಿಗಳಲ್ಲಿ ವ್ಯತ್ಯಾಸ ಮಾಡುವ ಅಥವಾ ಕೀಳರಿಮೆ ತೋರುವುದೇ ತಾರತಮ್ಯತೆ. ಇದನ್ನೇ 'ಭೇದಭಾವ' ಎಂದು ಕರೆಯುತ್ತೇವೆ.

ದೊಡ್ಡವರು ಎನಿಸಿಕೊಂಡವರು, ಬಲಿಷ್ಟರಾದವರು, ಪ್ರಬಲರು ಉಳಿದವರನ್ನು ಹೀನಾಯವಾಗಿ ಕಾಣುವ, ಅಥವಾ ತಮಗೆ ಸರಿಸಮಾನರಲ್ಲವೆಂಬ ರೀತಿಯಲ್ಲಿ ವರ್ತಿಸುವ ಅಥವಾ ಜನ-ಜನರಲ್ಲಿಯೇ ಇವರು ದೊಡ್ಡವರು, ಇವರು ಸಣ್ಣವರು, ಇವರು ಬುದಿವಂತರು, ಇವರು ದಡ್ಡರು, ಇವರು ನಮ್ಮವರು, ಇವರು ನಮ್ಮವರಲ್ಲ ಎಂಬ ಭೇದ ಭಾವವನ್ನು ಹುಟ್ಟು ಹಾಕಿ ಒಡಕು ಮೂಡಿಸಲು ಪ್ರವೃತ್ತರಾಗಿರುತ್ತಾರೆ.

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಹೇಳುವಂತೆ,

''ಯದ್ಯದಾಚರತಿ ಶ್ರೇಷ್ಠ ಃ
ತತ್ತ ದೇವೇತರೋ ಜನ ಃ
ಸಯತ್ ಪ್ರಮಾಣಂ ಕುರುತೇ
ಲೋಕಸ್ತದನು ವರ್ತತೇ'' - ಎಂದಿದ್ದಾನೆ.

ದೊಡ್ಡವರ ಮಾರ್ಗವನ್ನು ಉಳಿದವರು ಅನುಸರಿಸುತ್ತಾರೆ. ಆದರಿಂದ ದೊಡ್ಡವರು ಸರಿಯಾದ ಮಾರ್ಗದಲ್ಲಿ ನಡೆಯಬೇಕು. ದೊಡ್ಡವರು ಬೇರೆಯವರಿಗೆ ಮೇಲ್ಪಂಕ್ತಿಯಾಗುವಂತೆ ಬದುಕು ನಡೆಸಬೇಕು. ಇಂತಹ ದೊಡ್ಡವರು ಎನಿಸಿಕೊಂಡವರು ಉಳಿದವರನ್ನು ಸಮಾನತೆಯಿಂದ ಪ್ರೀತಿ ವಿಶ್ವಾಸಗಳಿಂದ ಆದರಗಳಿಂದ ಕಂಡರೆ, ಉಳಿದವರು ಅದೇ ದಾರಿಯಲ್ಲಿ ನಡೆಯುತ್ತಾರೆಂಬ ಸರ್ವಕಾಲಿಕ ಸತ್ಯ ಇಲ್ಲಿ ಅಡಗಿದೆ.

'ತಾರತಮ್ಯತೆ' ಎಂಬ ಈ ದುರ್ಗುಣ ಕುಟುಂಬಗಳಲ್ಲೂ, ಹೆತ್ತ ತಂದೆ ತಾಯಿಗಳಲ್ಲೂ, ಬಂಧು ಬಾಂಧವರಲ್ಲಿಯೂ ಹೊರತೇನಲ್ಲ. ಒಬ್ಬನನ್ನು ಇನ್ನೊಬ್ಬರೊಡನೆ ಹೋಲಿಸಿ ಅವನನ್ನು ಅಥವಾ ಅವಳನ್ನು ತಾತ್ಸಾರದಿಂದ ನೋಡುವ, ವಿಭಾಗಿಸಿ ನೋಡುವ ಹಾಗೂ ಅಗೌರವದಿಂದ ನಡೆದುಕೊಳ್ಳುವ ರೀತಿಯು ವಿಚಿತ್ರವೆನಿಸಿದರೂ ಸತ್ಯ ಘಟನೆಗಳು ನಮ್ಮ ನಿಮ್ಮ ಮುಂದಿವೆ. ಸಂಸಾರ-ಸಂಸಾರಗಳು ಇದರಿಂದ ವಿರಸಗಳಾಗಿ ಮಾರ್ಪಟ್ಟು ಸಂಬಂಧಗಳನ್ನೇ ಹಾಳು ಮಾಡಿಕೊಂಡಿವೆ. ಬದ ವೈರಿಗಳನ್ನಾಗಿ ಮಾಡಿ ಬಿಟ್ಟಿವೆ. ''ತಾರತಮ್ಯತೆಯ ಈ ಬೆಂಕಿ ಕಿಡಿಗಳು ಮನೆಗಳನ್ನು ಮನಗಳನ್ನು ಸುಟ್ಟುಬಿಡುತ್ತವೆ''.

ತಾರತಮ್ಯತೆಗೆ ಮೂಲ ಕಾರಣ ಅಹಂಕಾರ. ತಾನೇ ದೊಡ್ಡವನೆಂಬ ಅವನ ಅಹಂ, ಕೆಲವೊಮ್ಮೆ ಬೆಳೆದುಬಂದ ಹಿನ್ನೆಲೆ, ತಪ್ಪು ಗ್ರಹಿಕೆಗಳು ಕಾರಣವಾಗಿರುತ್ತದೆ. ಮಗದೊಮ್ಮೆ ಹಣದ ಮದ ಅಥವಾ ಅಧಿಕಾರದ ಮದಗಳೊಂದಿಗೆ ಅಲ್ಪವಿದ್ಯೆಯು ಈ ತಾರತಮ್ಯಕ್ಕೆ ಎಡೆ ಮಾಡಿಕೊಡುತ್ತದೆ.

ತಾರತಮ್ಯತೆಯು ಸಮಾನತೆಯ, ಸಹಬಾಳ್ವೆಯ, ಸಹಕಾರದ, ನೆಮ್ಮದಿಯ, ಶಾಂತಿಯ ವಿರುದ ಹೆಡೆ ಎತ್ತಿದ ಅಸುರೀಶಕ್ತಿ. ಸಂಬಂಧಗಳ ಒಡಕಿನ ದೊಡ್ಡ ಕಂದಕ. ಇದು ಕುಟುಂಬ-ಕುಟುಂಬಗಳ, ಸಮಾಜ-ಸಮಾಜಗಳ, ದೇಶ-ದೇಶಗಳ ಬಾಂಧವ್ಯದ, ಸಾಮರಸ್ಯದ ಪ್ರಗತಿಗಳಿಗೆ ಕಂಟಕ. ಮನುಷ್ಯ-ಮನುಷ್ಯರಲ್ಲಿ ಇವರು ಬಲ್ಲಿದರು, ವಿದ್ಯಾವಂತರು, ಶ್ರೀಮಂತರು ಎಂದು ವರ್ಗೀಕರಿಸುವ ಮತ್ತು ಉಳಿದವರನ್ನು ಅವಿದ್ಯಾವಂತರು, ಬಡವರು, ನಿಷ್ಪ್ರಯೋಜಕರೆಂಬಂತೆ ಬಿಂಬಿಸಿ ಮೂಲೆಗೆಸೆಯುವ, ಪ್ರವೃತ್ತಿ ಮಾನವೀಯ ಮೌಲ್ಯಗಳಿಗೆ ನೀಡಿದ 'ತಿಲಾಂಜಲಿ'ಯಾಗುತ್ತದೆ. ಇಂತಹ ವಾತಾವರಣದಲ್ಲಿ ಸುಸಂಸ್ಕೃತ ನಾಗರಿಕತೆ ಬೆಳೆಯಲು, ಉಳಿಯಲು ಸಾಧ್ಯವೇ ಇಲ್ಲ.

ಈ 'ತಾರತಮ್ಯತೆ' ಎಂಬುದು ವಿರಾಗಿಗಳು ಎನಿಸಿಕೊಂಡವರನ್ನು ಸಹ ಬಿಡುವುದಿಲ್ಲ. ಅಂತೆಯೇ ಸರ್ವವಿದ್ಯಾಪಾರಂಗತರು ಎಂಬ ಪಂಡಿತರಿಂದಲೂ, ವಿದ್ವಾಂಸರುಗಳಿಂದಲೂ ಈ ತಾರತಮ್ಯತೆಯನ್ನು ಹೊರಹಾಕಲು ಸಾಧ್ಯವಾಗಿರುವುದಿಲ್ಲ. ನಾನೆಲ್ಲಿ? ಅವನೆಲ್ಲಿ? ಅವನು ನನ್ನ ಕಾಲು ಭಾಗಕ್ಕೂ ಸರಿಸಮಾನ ಇಲ್ಲವೆಂಬ ಗರ್ವದಲ್ಲಿ ತಾರತಮ್ಯತೆ ಎಂಬ ವಿಷ ಬೀಜ ಹುಟ್ಟಿರುತ್ತದೆ. ಭೌತಿಕವಾಗಿ ಹತ್ತಿರದಲ್ಲಿದ್ದರೂ ಮಾನಸಿಕವಾಗಿ ಅತ್ಯಂತ ದೂರದಲ್ಲಿರುತ್ತೇವೆ.

ತಾರತಮ್ಯತೆಯನ್ನು ಕಿತ್ತೊಗೆಯಬೇಕಾದದು ಎಲ್ಲ ಮನುಜರ ಆದ್ಯ ಕರ್ತವ್ಯ. ಯಾವ ವ್ಯಕ್ತಿಯೂ ಸಣ್ಣವನಲ್ಲ. ಪ್ರತಿ ವ್ಯಕ್ತಿಯಲ್ಲಿಯೂ ಆ ಭಗವದ್‌ಶಕ್ತಿಯು ಒಂದೊಂದು ತೆರನಾದ ಬುದಿಶಕ್ತಿಯನ್ನು, ಪ್ರತಿಭೆಯನ್ನು ನೀಡಿದೆ. ಪ್ರತಿಯೊಬ್ಬರೂ ಇನ್ನೊಬ್ಬರನ್ನು ಮೆಚ್ಚುವ ಗೌರವಿಸುವ ಮತ್ತು ಅರಿಯುವ ಮನೋಭಾವವನ್ನು ಎಲ್ಲರೂ ಬೆಳೆಸಿಕೊಂಡು ನಾವೆಲ್ಲ ಮನುಜರು, ಸಮಾನರು ಎಂಬ ವಿಶ್ವಮಾನವ ಸಂದೇಶವು ಈ ತಾರತಮ್ಯತೆಯನ್ನು ಕಿತ್ತೊಗೆಯುವ ''ಬ್ರಹ್ಮಾಸ್ತ್ರ''ವಾಗಿದೆ. ಸರ್ವಜ್ಞ ನುಡಿದಂತೆ ತನ್ನಂತೆ ಪರರ ಬಗೆದೊಡೆ ಕೈಲಾಸ ಭಿನ್ನಣವಕ್ಕು ಎನಿಸುತ್ತದೆ. ಸಮಾನತೆಯ ನಡೆ-ನುಡಿಯಲ್ಲಿ ಸುಂದರ ಬದುಕಿದೆ. ಅದು ಎಂದೆಂದು ನಮ್ಮದಾಗಿರಲಿ.

# ''ನಂದಾದೀಪ''

ನವಯುಗದಲಿ ಶ್ರೀ ಸುಬ್ರಹ್ಮಣ್ಯನೇ ।
ನಿನ್ನ ನಾಮದ ಪ್ರಭೆ ಸಾಕಾರಾ ।ವಿಭು।।ನವ।
ಮಾನವಕುಲದ ಉನ್ನತಿಗಾಗಿಯೇ।
ನೀ ಅವತರಿಸುವೆ ನಿರಂ..ತರ......।।ನ।।
ಪಾದವು ನಮ್ಮದು ಪಥವೂ ನಮ್ಮದು।
ನಡೆಯುವ ಕಸುವನು ದಯಪಾಲಿಸು..।
ಮನಸೂ ನಮ್ಮದು ಕನಸೂ ನಮ್ಮದು।
ನನಸಾಗುವ ತೆರ ಕೃಪೆಮಾಡು......।।ನ।।
ಬತ್ತಿಯು ನಮ್ಮದು ತೈಲವು ನಮ್ಮದು।
ನಂದಾದೀಪದ ಸ್ತಂಭ ನಿನ್ನದಲ್ಲವೇ...।
ಜ್ಞಾನದ ಬೆಳಕನು ಪಸರಿಸು ಪ್ರಭುವೇ...।
ದೀನ ಅಜ್ಞಾನಿ ಶಿಶು ನಾನಲ್ಲವೇ...? ।।ನ।।
ಶ್ರದ್ಧೆಯು ನಮ್ಮದು ಸಿದ್ಧಿಯು ನಿನ್ನದು।
ಬುದ್ಧಿಯ ಕೊಡುವವ ನೀನಲ್ಲವೇ...।
ಕೆಡುಕನು ಅಳಿಸಿ ಒಳಿತನು ಬೆಳಗಿಸು
ಬೇಡುವೆ ಬೊಗಸೆಯ ನೀತುಂಬು...।।ನ।।
ಶತಾಬ್ದಿಯ ಸಂಭ್ರಮ ಸಲಿಲದಿಮಿಂದೆವು।
ಗುರುಪರಮಾನುಗ್ರಹೀತರಾದೆವು...।
ಸಮುದಾಯ ಪ್ರಗತಿಯ ಸತ್ಪಥ ಲಾಂಛನ।
ಬಾನೆತ್ತರದಲಿ ಮೆರೆಸು ಪ್ರಭು...।।ನ।।
ಅಭೀಪ್ಸೆಯ ತಲ್ಲಣ ಸುಮನಸ ತೋರಣ।
ಭಕ್ತಿಯ ಹೂರಣ ಸಿಂಪಡಿಸು...।
ಶಾಂತಿ ಸಂತಸ ಜಗಜ್ಯೋತಿ ಜ್ವಲನದಿ।
ಅನಂತ ಮಹಿಮೆಯ ಪ್ರಭೆಚೆಲ್ಲು....।।ನ।।
ಶರಣು ಶರಣು ಶ್ರೀವರ ಸುಬ್ರಹ್ಮಣ್ಯನೇ
ಸಾಮೂಹಿಕ ಕುಸುಮಾರ್ಚನೆಯು...।
ಶರಣು ಶರಣು ಶ್ರೀ ವಲ್ಲೀ ವಲ್ಲಭ।
ಭಾವೈಕ್ಯದಿ ಪ್ರಭು ನಮಿಸುವೆವು... ।।ನವ।।

**- ಶಾರದಾ ಆರ್. ರಾವ್**

**(ಉಡುಪಿ ಶಾರದಾ ಮಂಟಪದಲ್ಲಿ ನಡೆದ ಸ್ಥಾನಿಕ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ತಮ್ಮ ಅನುಪಸ್ಥಿತಿಯಲ್ಲಿ ವಾಚಿಸಲು ನೀಡಿದ ಕವನ)**

# ಪ್ರವಾಸ-ಪ್ರಯಾಸ? (ಒಂದು ಅನುಭವ)

(...3ನೇ ಪುಟದಿಂದ)

ತಾಳ್ಮೆಯನ್ನು ಹೊಂದಾಣಿಕೆ ಮಾಡಿದಲ್ಲಿ ಕನಿಷ್ಠ 5-6 ತಾಸು ಕಾದು ದರ್ಶನ ಮಾಡಬಹುದು. ಆದರೆ ಇನ್ನೊಂದು ದಿನದಲ್ಲಿ ನಾವು ನಮ್ಮ-ನಮ್ಮ ಸ್ಥಾನವನ್ನು ತಲಪಬೇಕಾಗಿತ್ತು. ಒಂದು ಗಂಟೆ ಕಾದು ಸರತಿಯಲ್ಲಿ ಶ್ರೀ ಶೈಲಾಧಿಪತಿಯ ದರ್ಶನಗೈದು ಹಿಂದಿರುಗಿದೆವು. ಈ ಕ್ಷೇತ್ರ ಚಂದದ ಪರಿಸರ, ರಮಣೀಯ ಕಾಡು-ಬೆಟ್ಟಗಳ ಹರಿಯುವ ಹೊಳೆಯ ಮಧ್ಯದಲ್ಲಿದ್ದರೂ ಶುಚಿತ್ವದ ಬಗ್ಗೆ ಆಡಳಿತದವರ ದಿವ್ಯ ನಿರ್ಲಕ್ಷ್ಯ ಎದ್ದು ಕಾಣುತ್ತಿತ್ತು. ಏನೇ ಇರಲಿ, ಚೆನ್ನಮಲ್ಲಿಕಾರ್ಜುನನ ದಿವ್ಯ ಸಾನ್ನಿಧ್ಯದಿಂದ ಮನಸ್ಸು ಮುದಗೊಂಡು, ನಮ್ಮ ಮುಂದಿನ ಪ್ರಯಾಣ ಮಂತ್ರಾಲಯಕ್ಕೆ ಅಣಿಯಾಯಿತು.

ಸುಮಾರು 300ಕಿ.ಮೀ. ದಾರಿ ಕ್ರಮಿಸಿ, ರಾತ್ರಿ 9-30ಕ್ಕೆ ಮಂತ್ರಾಲಯ ತಲುಪಿ ಗುರು ಶ್ರೀ ರಾಘವೇಂದ್ರರ ಬೃಂದಾವನಕ್ಕೂ ಭೇಟಿ ನೀಡಿದೆವು. ಯಾವುದೇ ನೂಕು-ನುಗ್ಗಲು, ಗಲಾಟೆ ಇಲ್ಲದೆ ಗುರು ಸರ್ವಭೌಮರ ಸಮಾಧಿಗೆ ನಮಿಸಿ, ಮಂತ್ರಾಕ್ಷತೆ ಪಡೆದು, ನಮ್ಮ ಉಡುಪಿಯವರ ಹೋಟೆಲೊಂದರಲ್ಲಿ ವಿರಮಿಸಿದೆವು. ಮಂತ್ರಾಲಯದಲ್ಲಿ ನನ್ನ ತಮ್ಮ ಹಾಗೂ ಅವನ ಸಂಸಾರಕ್ಕೆ ಅದೇ ರಾತ್ರಿ ಬಸ್ಸಿನಲ್ಲಿ ಟಿಕೆಟ್ ನಿಗದಿಯಾಗಿತ್ತು. ಹೃದಯ ಭಾರವಾಗಿ - ಒಲ್ಲದ ಮನಸ್ಸಿನಿಂದ ಅವರನ್ನು ಬೀಳ್ಕೊಡಬೇಕಾಯ್ತು. ನಾವು ರಾತ್ರಿ ಮಂತ್ರಾಲಯದಲ್ಲಿ ಉಳಿದು ಬೆಳಿಗ್ಗೆ ಬೇಗ ಎದ್ದು ಇನ್ನೊಮ್ಮೆ ಗುರುಗಳ (ಬೃಂದಾವನ) ದರ್ಶನಗೈದು ಊರಿನ ಕಡೆ ಮುಖ ಮಾಡಿದೆವು.

ತಾ.04 ರಂದು ಬೆಳಗ್ಗೆ 7.30 ಗಂಟೆಗೆ ಮಂತ್ರಾಲಯದ ಸಮೀಪವಿರುವ ಪಂಚಮುಖಿ ಆಂಜನೇಯನ ದರ್ಶನ ಪಡೆದು, ಆಲೂರು-ಚಳ್ಳಕೆರೆ-ಚಿತ್ರದುರ್ಗ-ಶಿವಮೊಗ್ಗ-ಆಗುಂಬೆಗಾಗಿ ಕಾರ್ಕಳ ತಲಪಿದೆವು. (ರಾತ್ರಿ9.30ಗೆ) ಇನ್ನೊಬ್ಬ ತಮ್ಮನನ್ನು ಅಲ್ಲಿಬಿಟ್ಟು ನಾರಾವಿ-ಗುರುವಾಯನಕೆರೆ- ಉಪ್ಪಿನಂಗಡಿ ಮಾರ್ಗವಾಗಿ ಕ್ಕೊಲ ಎಂಬಲ್ಲಿ ನನ್ನ ಭಾವ ಹಾಗೂ ತಂಗಿಯನ್ನು ಅವರ ಮನೆಗೆ ಕಳಿಸಿ, ಭಾರವಾದ ಹೃದಯದಿಂದ ನಾನು-ನನ್ನ ಪತ್ನಿ ಯಶೋದ, ಚಾಲಕ ಗೋಪಾಲನೊಂದಿಗೆ ರಾತ್ರಿ 11-30ಕ್ಕೆ ಕಡಬ ತಲುಪಿದೆವು. ಸುಮಾರು 640 ಕಿ.ಮೀ (ಮಂತ್ರಾಲಯ-ಕಡಬ) ದೂರದ 16 ಗಂಟೆಯ ಸುದೀರ್ಘ ಪ್ರಯಾಣದಲ್ಲಿ ಬಳಲಿದರೂ ಒಂದು ಅವ್ಯಕ್ತ ಅಗಲಿಕೆಯ ನೋವು ಹಾಗೂ ಸಂತಸದ ಮಿಶ್ರ ಭಾವನೆ ನನ್ನನ್ನು ಆವರಿಸಿತು. ಒಂದೇ ವಾಹನದಲ್ಲಿ ಸಂಬಂಧಿಗಳಾದ ನಾವು 9 ದಿನಗಳಿಂದ 3650 ಕಿ.ಮೀ. ಪ್ರಯಾಣಿಸಿ ಒಟ್ಟಾಗಿದ್ದವರು, ಅವರವರ ಬದುಕಿಗೆ ಹಿಂತಿರುಗಿದ್ದೇವೆ. ಈ ಪ್ರವಾಸವನ್ನು ಮೆಲುಕು ಹಾಕುತ್ತಾ ಸಂಬಂಧಿಗಳಿಗೆ/ಸ್ನೇಹಿತರಿಗೆ ವಿವರಿಸುವುದೇ ಒಂದು ರೀತಿಯ ಹೆಮ್ಮೆ ಆನಂದ.

ದೇಶದ ಶ್ರೀ ಕ್ಷೇತ್ರಗಳ ಒಟ್ಟಾರೆ ಪರಿಸ್ಥಿತಿಯನ್ನು ಅವಲೋಕಿಸಿದಾಗ, ಅಲ್ಲಿಯ ಅವ್ಯವಸ್ಥೆಗಳಿಂದ ಮುಖ್ಯವಾಗಿ ಶುಚಿತ್ವ, ಮುಗ್ಧಜನರ ಶೋಷಣೆಗೆ ಹಾಗೂ ಆವಶ್ಯಕ ಸೌಲಭ್ಯಗಳ ಕೊರತೆ ಎಲ್ಲೆಲ್ಲೂ ಕಾಣುತ್ತಿದೆ. (ಕೆಲವು ದೇವಾಲಯಗಳನ್ನು ಬಿಟ್ಟು) ಈ ಕ್ಷೇತ್ರಗಳ ಸುಧಾರಣೆಗೆ ಸಂಬಂಧಿಸಿದ ಇಲಾಖೆಗಳು ಮನಸ್ಸು ಮಾಡಬೇಕು. ಸುಧಾರಣೆಯಾದಲ್ಲಿ ಪ್ರವಾಸಗಳು ಪ್ರಯಾಸವಾಗದೆ ಹೆಚ್ಚಿನ ಜನರು ಕ್ಷೇತ್ರದರ್ಶನವನ್ನು ನಿರಾಂತಕವಾಗಿ ಮಾಡಬಹುದು.

ಸಂತಸದ ವಿಷಯವೆಂದರೆ, ದಾರಿಯುದ್ದಕ್ಕೂ ಮುಖ್ಯವಾಗಿ ಮಹಾರಾಷ್ಟ್ರದಲ್ಲಿ ನಮ್ಮ ಊರಿನವರ (ಉಡುಪಿ-ಕುಂದಾಪುರ ಕಡೆಯವರ) ಹೋಟೆಲ್‌ಗಳಿದ್ದು ನಮ್ಮ ಊಟ ಉಪಹಾರಗಳಿಗೆ ಯಾವುದೇ ತೊಂದರೆಯಾಗಲಿಲ್ಲ. ಸೂಕ್ತ ಮಾರ್ಗದರ್ಶನ ಕೂಡಾ ಅವರಿಂದ ಸಿಗುತ್ತಿತ್ತು. ನಮ್ಮ ಪ್ರಯಾಣದಲ್ಲಿ ಸುಮಾರು 20 ಹೆದ್ದಾರಿ ಟೋಲ್ ಗೇಟ್‌ಗಳು ಸಿಕ್ಕಿದ್ದು ನಮ್ಮಿಂದ ಸಾಕಷ್ಟು ಕರವಸೂಲು ಮಾಡಿದ್ದಾರೆ. ಕೆಲವು ಹೆದ್ದಾರಿಗಳು ಬಹಳ ಉತ್ತಮವಾಗಿದ್ದು ಇನ್ನು ಕೆಲವು ಕಡೆ ದುರಸ್ತಿ-ಅಗಲೀಕರಣ ನಡೆಯುತ್ತಿದೆ. ಉತ್ತಮ ರಸ್ತೆಗಳು ದೇಶದ ಆರ್ಥಿಕ ಬೆಳವಣಿಗೆಗೆ ಸಹಕಾರಿ. ಇನ್ನು ಕೆಲವು ಸಮಯದಲ್ಲಿ ಎಲ್ಲೆಡೆ ಒಳ್ಳೆಯ ರಸ್ತೆಗಳು ಹಾಗೂ ಉತ್ತಮ ಸಂಚಾರ ವ್ಯವಸ್ಥೆ ಆಗುವುದರಲ್ಲಿ ಅನುಮಾನವಿಲ್ಲವೆಂದು ನನ್ನ ನಂಬಿಕೆ.

ಇನ್ನು ನಮ್ಮ ಯುವ ಸಾರಥಿ (ಡ್ರೈವರ್) ಬಗ್ಗೆ ಎರಡು ಮಾತು. ನಮ್ಮಂತಹ ಹಿರಿಯ ನಾಗರಿಕ ಪ್ರಯಾಣಿಕರೊಂದಿಗೆ ಹೊಂದಿಕೊಂಡು, ಪ್ರತಿಯೊಂದು ಹಂತದಲ್ಲೂ ಸಹಾಯಹಸ್ತ (ನಮ್ಮ ಲಗೇಜುಗಳನ್ನು ಹೋಟೆಲ್‌ಗಳಿಗೆ ತರುವುದು - ಪುನಃ ಗಾಡಿಗೆ ಹಾಕುವುದು ಇತ್ಯಾದಿ) ನೀಡುತ್ತಾ, ನಗುತ್ತಾ-ನಗಿಸುತ್ತಾ ಸಮಯಕ್ಕೆ ಸರಿಯಾಗಿ ನಮ್ಮ ನಿಗದಿತ ಸ್ಥಾನಗಳಿಗೆ ತಲುಪಿಸುವ ಅವನ ಗುಣ ನಮಗೆಲ್ಲಾ ಮೆಚ್ಚುಗೆಯಾಯ್ತು. ಇಂತಹ ಒಳ್ಳೆಯ ಸಾರಥಿ ಸಿಕ್ಕಿದರೆ ಪ್ರವಾಸಗಳು ಪ್ರಯಾಸ ರಹಿತವಾಗಿರುತ್ತವೆ. ದುರಾದೃಷ್ಟಕ್ಕೆ ಅವನಿಗೆ ಭಾಷಾ ಜ್ಞಾನವಿಲ್ಲದೆ, ಅವನು ನಮ್ಮನ್ನೇ ಅವಲಂಭಿಸಿ ಪ್ರಯಾಸಪಟ್ಟ.

ಈ ಲೇಖನದ ಕೆಲವು ಅನಿಸಿಕೆಗೆ ಓದುಗರ ಸಹಮತವಿಲ್ಲದಿರಲೂ ಬಹುದು, ಕ್ಷಮಿಸಿ!

ಲೋಕೋಭಿನ್ನರುಚಿಃ.......

PRAMOD
AUTOMOBILES
KARANGALPADY, MANGALORE -575 003.
Ph : 2491723 (0)
2493633 (H.O.)
2212723 (R)
: Wholesale & Retail Dealers in :
2 & 3 WHEELERS SPARES & ACCESSORIES
Prop. :Ln.K. HARSHA KUMAR

ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
ಫೋನ್ : 2454355, ಮೊಬೈಲ್ : 94485 45702

ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ
